# ಬಿಂದು ಬಿಂದು ಸೇರಿ ಮಾಲಿನಿಯದ್ದೇ ದಾರಿ...



ಹಲವು ಕಲಾಪ್ರಕಾರಗಳ ಪರಿಚಯ ಇರುವ ಪ್ರತಿಭಾವಂತೆ ಬಿಂದುಮಾಲಿನಿ ನಾರಾಯಣಸ್ವಾಮಿ. ತಮಿಳಿನ 'ಅರುವಿ' ಚಿತ್ರಕ್ಕೆ ಇವರು ಸಂಯೋಜಿಸಿದ ಸಂಗೀತ ಸಾಕಷ್ಟು ಜನಪ್ರಿಯವಾಗಿತ್ತು. ಅನನ್ಯಾ ಕಾಸರವಳ್ಳಿ ನಿರ್ದೇಶನದ 'ಹರಿಕಥಾ ಪ್ರಸಂಗ'ದ ಸಂಗೀತ ಸಂಯೋಜನೆಯೂ ಇವರದೇ. ಎಂ.ಡಿ. ಪಲ್ಲವಿ ಅವರೊಂದಿಗೆ ಇವರು ನೀಡಿದ ಜುಗಲಬಂದಿ ಸಂಗೀತ ಕ್ಷೇತ್ರದಲ್ಲೊಂದು ವಿಶಿಷ್ಟ ಪ್ರಯೋಗ. ಸದಾ ಹೊಸತನಕ್ಕೆ, ಕಲಿಯುವಿಕೆಗೆ ಹಂಬಲಿಸುತ್ತಲೇ ಇರುವ ಬಿಂದು ಅವರಿಗೆ ಸಿನಿಮಾ ಸಂಗೀತವೂ ತಮ್ಮ ಪ್ರಯೋಗಶೀಲತೆಯ ವಿಸ್ತರಣೆಯ ದಾರಿಯಾಗಿಯೇ ಕಾಣಿಸುತ್ತಿದೆ. ಇತ್ತೀಚೆಗೆ ಅವರು ಮಂಸೋರೆ ನಿರ್ದೇಶನದ 'ನಾತಿಚರಾಮಿ' ಚಿತ್ರಕ್ಕೆ ಸಂಯೋಜಿಸಿರುವ ಗೀತೆಗಳು ಸಹೃದಯರ ಗಮನಸೆಳೆದಿವೆ.

■ ಪದ್ಮನಾಭ್ ಭಟ್

◆ **ಶಾಸ್ತ್ರೀಯ ಸಂಗೀತ, ಪಾಶ್ಚಾತ್ಯ ಸಂಗೀತ, ಸೂಫಿ ಸಂಗೀತ ಹೀಗೆ ಸಂಗೀತದ ಬೇರೆ ಬೇರೆ ಪ್ರಕಾರಗಳಲ್ಲಿ ಕೆಲಸ ಮಾಡಿ ಅನುಭವ ಇರುವ ನಿಮಗೆ, ಸಿನಿಮಾ ಸಂಗೀತ ಅವುಗಳಿಗಿಂತ ಹೇಗೆ ಭಿನ್ನ ಅನಿಸಿದೆ?**

ಚಿಕ್ಕವಯಸ್ಸಿನಿಂದಲೂ ನನ್ನ ಮೇಲೆ ಸಿನಿಮಾ ಹಾಡುಗಳು ಪ್ರಭಾವ ಬೀರುತ್ತಲೇ ಬಂದಿವೆ. ನಮ್ಮ ಮನೆಯಲ್ಲಿ ಬರೀ ಶಾಸ್ತ್ರೀಯ ಸಂಗೀತ ಅಷ್ಟೇ ಕೇಳಬೇಕು ಎಂಬ ನಿರ್ಬಂಧ ಇರಲಿಲ್ಲ. ರೇಡಿಯೊ ಯಾವಾಗಲೂ ಚಾಲೂ ಇರುತ್ತಿತ್ತು. ಅಣ್ಣ, ಅಕ್ಕ ಎಲ್ಲರೂ ಸಿನಿಮಾ ಹಾಡುಗಳನ್ನು ಕೇಳುತ್ತಿದ್ದರು.

ಹೀಗೆ ಸಿನಿಮಾ ಹಾಡುಗಳ ಪ್ರಭಾವ ನನ್ನ ಮೇಲೆ ಸಾಕಷ್ಟಿದ್ದರೂ ಸಿನಿಮಾ ಗೀತೆಗಳನ್ನು ಸಂಯೋಜನೆ